# ಸಾಹಿತ್ಯ ಸಂದರ್ಭ

ಕನ್ನಡ ಸಾಹಿತ್ಯದ ಈಗಿನ ಸಂದರ್ಭ ಹೇಗಿದೆ, ಅದರಲ್ಲಿ ಏನೇನು ಆಗುತ್ತಿದೆ, ಪ್ರಮುಖವಾದ ಬದಲಾವಣೆಗಳು ಏನಾದರೂ ಸಂಭವಿಸುತ್ತಿವೆಯೇ ಅಥವಾ ಹೊಸವಿಷಯಗಳು ಮುನ್ನೆಲೆಗೆ ಬಂದಿವೆಯೇ – ಎಂಬ ಸಂಗತಿಗಳು ಅನೇಕ ಆಸಕ್ತರ ಕುತೂಹಲಕ್ಕೆ ವಸ್ತುವಾಗಿರುತ್ತವೆ. ಕರ್ನಾಟಕದ ಸಮ್ಮಿಶ್ರ ಸರ್ಕಾರದ ಬಗೆಯಲ್ಲಿ ಮಿಶ್ರಭಾವನೆಗಳನ್ನು ಹುಟ್ಟಿಸುವಂತೆ ವರ್ತಮಾನದ ಸಾಹಿತ್ಯ ಸಂದರ್ಭವಿದೆ. ಅದೊಂದು ರೀತಿ ಹವಾಮಾನ ವರದಿಯ ಹಾಗೆ. 'ಹಗುರದಿಂದ ಸಾಧಾರಣ ಮಳೆ ಬೀಳಲಿದೆ; ಅಲ್ಲಲ್ಲಿ ತುಂತುರು ಮಳೆಯಾಗಲಿದೆ' ಎನ್ನುವಂತೆ! ಈ ಹಗುರ, ಸಾಧಾರಣ, ತುಂತುರು ಮಳೆಗಳಿಗೆ ಜೀವರಾಶಿಯನ್ನು ಸೃಷ್ಟಿಸುವ, ಪೊರೆಯುವ ಶಕ್ತಿ ಇಲ್ಲ. ಈಗಿತ್ತಲಾಗಿ ಉತ್ತಮ ಎನ್ನಬಹುದಾದ ಅಲ್ಲೊಂದು ಕಾದಂಬರಿ, ಇಲ್ಲೊಂದು ಕಥಾಸಂಗ್ರಹ, ಕವನ ಸಂಗ್ರಹಗಳ ನಡುವೆ ಹತ್ತಾರು ಬಗೆಯ ಪುಸ್ತಕಗಳು ಪ್ರಕಟವಾಗುತ್ತಲೇ ಇರುತ್ತವೆ. ಅವೆಲ್ಲವೂ ಓದುಗರು ಓದಿ ಖುಷಿಯಿಂದ ಕುಣಿದಾಡುವಂತೆ ಇರುವುದಿಲ್ಲ ಎಂಬುದು ಪರಿಣತ ವಿಮರ್ಶಕರ ಆಕ್ಷೇಪ. ಇಂತಹ ಸಂದರ್ಭಗಳು ಸಾಹಿತ್ಯದಂತಹ ಕಲೆಯ ಕ್ಷೇತ್ರದಲ್ಲಿ ಸಾಮಾನ್ಯ. ಒಂದು ಕಾಲಘಟ್ಟದ ನಿರ್ವಾತ ಮುಂದಿನ ಉತ್ತಮ ಸಾಹಿತ್ಯದ ಫಸಲಿನ ಸಿದ್ಧತೆ ಇರಬಹುದು. ಮಾವಿನ ಮರಗಳು ಒಂದು ವರ್ಷ ಉತ್ತಮ ಫಲಕೊಟ್ಟರೆ ಇನ್ನೊಂದು ವರ್ಷ ಕಡಿಮೆ ಫಸಲನ್ನು ಕೊಡುತ್ತವೆ. ಅತಿಯಾದ ಬೆಳೆ ಬಂದರೂ ಜನರು ನಿರ್ಲಕ್ಷಿಸಬಹುದು. ಆಯಾಕಾಲದ ಉತ್ತಮ ಸಾಹಿತ್ಯವನ್ನು ಆ ಕಾಲಘಟ್ಟವೇ ನಿರ್ಧರಿಸುತ್ತದೆ. ಅದಕ್ಕೆ ವಿಮರ್ಶಕರ ನೆರವೇನೂ ಬೇಕಿಲ್ಲ.

ಈ ಸಂಚಿಕೆಯಲ್ಲಿ ಕತೆ, ಕಾದಂಬರಿಕಾರ ಗುರುಪ್ರಸಾದ ಕಾಗಿನೆಲೆ ಅವರ ಸಂದರ್ಶನವಿದೆ. ಸೂಕ್ಷ್ಮಸಂವೇದನೆಯ ಈ ಲೇಖಕ ವರ್ತಮಾನಕ್ಕೆ ಸ್ಪಂದಿಸಿ ಬರೆಯುವ ಕತೆಗಾರ. ಅವರ ಮಾತುಗಳಲ್ಲಿ ಈ ಕಾಲದ ತವಕ–ತಲ್ಲಣಗಳಿವೆ. ಮತ್ತು ವಾಸ್ತವದ ಚಿತ್ರಣವಿದೆ.

ಕನ್ನಡಕ್ಕೆ ವಿಶಿಷ್ಟ ಕಾದಂಬರಿಗಳನ್ನು ಕೊಟ್ಟ ಕುಸುಮಾಕರ ದೇವರಗೆಣ್ಣೂರ ಅವರು ನಿರೂಪಿಸಿದ ಕವಿ ದ.ರಾ. ಬೇಂದ್ರೆಯವರ ವ್ಯಕ್ತಿತ್ವವನ್ನು ಕಾಣಿಸುವ ಹಲವು ಪ್ರಸಂಗಗಳನ್ನು ಕೊಡಲಾಗಿದೆ. ಜೊತೆಗೆ ಬದುಕಿನ ನೇರ ಸಂಪರ್ಕ ಪಡೆದ, ಅದರ ಚಿತ್ರಣ ಇರುವ ಕತೆಗಳು, ಅನುಭವದ ನಿರೂಪಣೆಗಳಿವೆ. ಈ ಸಂಚಿಕೆಯಿಂದ ಚಿತ್ರ–ಅಂಕಣ 'ಸ್ಮೃತಿಬಿಂಬ' ಶುರುವಾಗುತ್ತಿದೆ. ಇವೆಲ್ಲವೂ ಓದುಗರಿಗೆ ಬದುಕನ್ನು ನೋಡುವ ಹೊಸಬಗೆಯ ನೋಟಗಳನ್ನು ಕೊಡುತ್ತವೆ ಎಂಬುದು ನಮ್ಮ ವಿಶ್ವಾಸ.

**ಸಂದೀಪ ನಾಯಕ**

